# ಕನ್ನಡ ಸಾಹಿತ್ಯದ ಜಾನಪದ ಕ್ಷೇತ್ರದಲ್ಲಿ ಡಾ. ಡಿ.ಕೆ.ರಾಜೇಂದ್ರ ಅವರ ಪಾತ್ರ, ಕೊಡುಗೆ ಮತ್ತು ಚಿಂತನೆಗಳ ಒಂದು ನೋಟ

ಎಂ. ಎನ್. ದಿನೇಶ್*

DOI: https://doi.org/10.5281/zenodo.23096764

**ABSTRACT**

ಕನ್ನಡ ಜಾನಪದ ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಡಾ. ಡಿ.ಕೆ. ರಾಜೇಂದ್ರ ಅವರ ಕೊಡುಗೆ ಅತ್ಯಮೂಲ್ಯವಾದದ್ದು. ತುಮಕೂರು ಜಿಲ್ಲೆಯವರಾದ ಇವರು ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಹಾಗೂ ವಿಶೇಷವಾಗಿ 'ಕರಪಾಲ ಮೇಳ'ದ ಕುರಿತು ಆಳವಾದ ಅಧ್ಯಯನ ನಡೆಸಿ, ಜನಪದ ಕಲೆಯನ್ನು ಶಾಸ್ತ್ರೀಯ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ವಿಮರ್ಶೆ, ಪ್ರಬಂಧ, ಸಮೀಕ್ಷೆ ಮತ್ತು ಸಂಪಾದನಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಅವರು, ಜನಪದವನ್ನು ಕೇವಲ ಗತಕಾಲದ ಇತಿಹಾಸವಾಗಿ ನೋಡದೆ ಜೀವಂತ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಗುರುತಿಸಿದ್ದಾರೆ. ಸಸ್ಯ, ಪ್ರಾಣಿ ಮತ್ತು ಆಕಾಶ ಜಾನಪದದಂತಹ ಹೊಸ ಆಯಾಮಗಳತ್ತ ಸಂಶೋಧನೆ ವಿಸ್ತರಿಸಬೇಕೆಂಬ ಅವರ ವೈಚಾರಿಕ ನಿಲುವುಗಳು ಹಾಗೂ ಸಾಂಸ್ಕೃತಿಕ ಚಿಂತನೆಗಳನ್ನು ಇಲ್ಲಿ ಸವಿವರವಾಗಿ ಕಟ್ಟಿಕೊಡಲಾಗಿದೆ. ಮೌಖಿಕ ಪರಂಪರೆಯನ್ನು ಅಕ್ಷರ ಮಾಧ್ಯಮಕ್ಕೆ ಇಳಿಸುವಲ್ಲಿ ಅವರ ಶೈಕ್ಷಣಿಕ ಬದ್ಧತೆ ಮತ್ತು ಸಾಧನೆಗಳ ಸಮಗ್ರ ಚಿತ್ರಣವನ್ನು ಒದಗಿಸಲಾಗಿದೆ.

**KEYWORDS:** ಡಾ. ಡಿ.ಕೆ. ರಾಜೇಂದ್ರ, ಜಾನಪದ ಸಾಹಿತ್ಯ, ಜನಪದ ರಂಗಭೂಮಿ, ಕರಪಾಲ ಮೇಳ, ಜಾನಪದ ಸಂಶೋಧನೆ.

* **ಡಾ. ಎಂ. ಎನ್. ದಿನೇಶ್,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ತುಮಕೂರು ಜಿಲ್ಲೆ ಕಲೆಗಳ ತೌರೂರು, ಕವಿ ಕಲಾವಿದರ ನೆಲೆಬೀಡು, ಗಂಡು ಮೆಟ್ಟಿದ ನಾಡು, ಕಲ್ಪವೃಕ್ಷಗಳ ಬೀಡು. ಈ ಎಲ್ಲಾ ವರ್ಣನೆ ಕವಿವಾಣಿ. ಆದರೆ ಇಲ್ಲಿ ಒಂದು ಮಾತಿದೆ "ಕವಿವಾಣಿ ಹೂವು ಜನವಾಣಿ ಬೇರು", ಈ ಮಾತು ಒಮ್ಮೊಮ್ಮೆ ಅಕ್ಷರಶಃ ಸತ್ಯವೆನಿಸಿಬಿಡುತ್ತದೆ.

ಈ ಜಿಲ್ಲೆಯ ಜಲ-ನೆಲ-ಗಾಳಿ ಪ್ರಕೃತಿಯ ಕೊಡುಗೆ. ಆದರೂ ಅನೇಕ ಅನೇಕ ಕವಿ, ಕಲಾವಿದರಿಗೆ, ಸಹೃದಯ ವಿಮರ್ಶಕರಿಗೆ ಜನ್ಮನೀಡಿ ಪುನೀತರಾಗಿದ್ದಾಳೆ ಭೂಮಿತಾಯಿ. ಈ ಮಾತಿಗೆ ಅರ್ಥಗರ್ಭಿತರಾಗುವುದಾದರೆ ಮೇಲಿನ ಶೀರ್ಷಿಕೆಗೆ ತಕ್ಕುದಾದಂತೆ ಡಾ. ಡಿ.ಕೆ.ರಾಜೇಂದ್ರ ಅವರು ಅವರ ಕನ್ನಡ ಸಾಹಿತ್ಯದ ಕಾರ್ಯ ವೈಖರಿ, ತಮ್ಮ ಕ್ಷೇತ್ರದ ಸಾಧನೆಯ ಹಾದಿಗೆ ಒಂದಿಷ್ಟು ಚಿಂತನೆ ಅವಲೋಕನ ಮಾಡೋಣ.

ಡಿ.ಕೆ.ರಾಜೇಂದ್ರರವರು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ದಂಡಿನಶಿವರದಲ್ಲಿ ಹುಟ್ಟಿ ಬೆಳೆದ ಒಬ್ಬ ಜಾನಪದ ಸಾಹಿತ್ಯ ಕ್ಷೇತ್ರದ ವಿವೇಚನಾಶೀಲರಲ್ಲಿ ಒಬ್ಬರು. ಮನುಷ್ಯಪ್ರಾಣಿಗೆ ಹುಟ್ಟು, ಸಾವು ಸಹಜ. ಆದರೆ ಈ ನಡುವೆ ನಾನು ಹುಟ್ಟಿದ ನಾನೇನು ಕೊಟ್ಟೆ? ನಾನು ಹುಟ್ಟಿದ್ದಾದರೂ ಯಾಕೆ? ನಾನು ಮಾಡಬಹುದಾದರೂ ಏನು? ಎಂಬಿತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡಾಗ ಮಾತ್ರ ಒಂದಿಷ್ಟು ಉತ್ತರ ದೊರಕೀತು. ಆ ಉತ್ತರವೇ ಡಾ. ಡಿ.ಕೆ.ರಾಜೇಂದ್ರ ಅವರು, ಅಂದರೆ ಕ್ಲೀಷೆಯ ಮಾತೇನೂ ಆಗಲಾರದು. ಅದಕ್ಕೆ ಡಾ. ಜಿ.ಎಸ್. ಶಿವರುದ್ರಪ್ಪನವರ ಪ್ರೀತಿ ಇಲ್ಲದ ಮೇಲೆ ಪದ್ಯ ಉತ್ತರ ಹೇಳೀತು.

ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಅನೇಕರು ಆಗಿಹೋದ ಕವಿ ಪುಂಗವರಲ್ಲಿ, ಲೇಖಕರಲ್ಲಿ, ಸಹೃದಯರಲ್ಲಿ ಒಂದೇ ಎರಡೇ ಹತ್ತು ಹನ್ನೊಂದು ನೂರು ಸಹಸ್ರ ಹೀಗೆ ಮುಂದುವರಿಯುತ್ತದೆ ಲೆಕ್ಕ. ಪಂಪನಿಂದ ಹಿಡಿದು ಇಂದಿನ ನವನವೋನ್ಮುಖ ವಿಚಾರವಂತರಾದಿಗಳನ್ನು ಅವಲೋಕನ ಮಾಡುತ್ತಾ ಹೋದಂತೆ, ನಮ್ಮ ಡಿ. ಕೆ.ರಾಜೇಂದ್ರ ಅವರ ಕ್ಷೇತ್ರ-ವಿಚಾರ-ಚಿಂತನ-ಮಂಥನಗಳ ಬಗ್ಗೆ ಕೊಂಚ ನಿಂತು ನೋಡಬೇಕಾಗುತ್ತದೆ. ಅದು ಹಾಗೆ ಇದೆ ಎಂದರೆ ತಪ್ಪಾಗಲಾರದು.

ಡಾ. ಡಿ.ಕೆ.ರಾಜೇಂದ್ರರವರು ಪ್ರೀತಿಯಿಂದ ಸಜ್ಜನಿಕೆಯ ಸಹೃದಯರು ಎಂಬಲ್ಲಿ ಎರಡು ಮಾತಿಲ್ಲ. ಸದಾ ಅಧ್ಯಯನಶೀಲರು, ಚಿಂತಕರು ತಮ್ಮ ಕೈಲಾದ ಕೆಲಸವನ್ನು ಮನಮುಟ್ಟುವಂತೆ ಮಾಡಿತೋರಿಸುವ ಹಠಮಾರಿತನದ ದಿಟ್ಟ ಮನಸ್ಸು ಅವರಿಗೆ ಇದೆ. ಆದುದರಿಂದಲೇ ಈ ಮೇಲಿನ ತಲೆಬರಹದಲ್ಲಿ ಡಾ. ಡಿ.ಕೆ.ರಾಜೇಂದ್ರ ಸಾಧನೆಯೂ ಮುಖದ್ವಾರವಾಗಿ ಬಿಡುತ್ತದೆ. ನಾನು ಇಲ್ಲಿ ವ್ಯಕ್ತಿಗತ ವರ್ಣನೆಗೆ ಹೆಚ್ಚು ಕಾಲ, ಮಾತು ವಿಳಂಬ ಮಾಡದೆ ಕಾರ್ಯಸಾಧನೆಯ ಹಾದಿ ಕಡೆಗೆ ಗಮನ ಕೊಡುತ್ತೇನೆ.

ಡಾ. ಡಿ.ಕೆ.ರಾಜೇಂದ್ರ ಅವರು ಹುಟ್ಟಿ ಬೆಳೆದ ಪರಿಸರದ ಹಿಂದೆ ಒಂದಿಷ್ಟು

ಸಾಹಿತ್ಯಕ ಪ್ರಕ್ರಿಯೆಯು ಯಥಾವತ್ತಾಗಿ ನಡೆದಿದೆ ಅನ್ನುವುದಕ್ಕೆ ಅವರ ಸಾಹಿತ್ಯಕ್ಷೇತ್ರ ಕ್ರಿಯಾತ್ಮಕ ಭಾವನೆಗಳು ವಿಸ್ತಾರವಾಗಿವೆ. ಅದು ಅವರ ಸಾಧನೆಗೆ ಹಾಸುಹೊಕ್ಕಾಗಿ ಹಿರಿಯರಾದ ಗುರು ಪರಂಪರೆಯ ಬೆಳೆಯ ಬೀಜ ಹೆಚ್ಚು ಪರಿಣಾಮಕಾರಿಯಾಗಿ ನೆಲೆಯೂರಿದೆ, ಜೊತೆಗೆ ಬೇರೂ ಬಿಟ್ಟಿದೆ.

ಡಾ. ಹಾ.ಮಾ.ನಾಯಕ, ಡಾ. ಜೀ.ಶಂ.ಪರಮಶಿವಯ್ಯ, ಕುವೆಂಪು, ಬೇಂದ್ರೆ, ಅಂತಹ ಗುರುಪರಂಪರೆಯ ತೀಕ್ಷ್ಣತೆ ಇವರ ಸಾಧನೆಗೆ ಹಾದಿ ಇದ್ದಿರಬಹುದು. ಆದರೂ ಸ್ವಯಂಸ್ಫೂರ್ತಿ ಬೇಕಲ್ಲ. ಇದು ಬಹಳ ಮುಖ್ಯ. ಜಾನಪದ ಕ್ಷೇತ್ರದಲ್ಲಿ ಅವರು ನಡೆಸಿರುವ ಅಧ್ಯಯನಗಳು ಅತ್ಯಂತ ಗಮನಾರ್ಹ. ಒಳ್ಳೆಯ ಸಂಶೋಧಕರಾಗಿ, ವಿಮರ್ಶಕರಾಗಿ, ಜನಮನ್ನಣೆಯನ್ನು ಸಾಧನೆ ಕಂಡಿದ್ದಾರೆ. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿಯ ಬಗ್ಗೆ ಆಳವಾದ ಅಧ್ಯಯನ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಅವರು ಮಾಡಿರುವ ವಿಶೇಷ ಸಾಧನೆಯಲ್ಲೊಂದಾದ "ಕರಪಾಲಮೇಳ" ಸಂಗ್ರಹ ಜಾನಪದ ವಿಶಿಷ್ಟವಾದದ್ದು. ಇದನ್ನು ಅವರು ನೋಡುವ ದೃಷ್ಟಿ ವಿಭಿನ್ನ. ಕಲೆಯನ್ನು ಒಂದು ವಿಜ್ಞಾನವಾಗಿ ನೋಡುವ ದಿಸೆಯಲ್ಲಿ ಅದನ್ನು ಹೇಗಾದರೂ ಮಾಡಿ ಅಕ್ಷರ ಮಾಧ್ಯಮದಲ್ಲಿ ಯಥಾವತ್ತಾಗಿ ಹಿಡಿದಿಡಬೇಕು ಎನ್ನುವ ಮಹದಾಸೆ ಸಾರ್ಥಕವಾಗಿಸಿದ್ದಾರೆ. ಕರಪಾಲಮೇಳದ ಸರ್ವ ವಿವರಗಳನ್ನು ಅಧ್ಯಯನ ಮಾಡಿ ಅತ್ಯಂತ ಮನಮೋಹಕವಾದ ರೀತಿಯಲ್ಲಿ ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ಸಂಗ್ರಹಿಸಿದ್ದಾರೆ, ಸಂಪಾದಿಸಿದ್ದಾರೆ.

ಡಾ. ಡಿ.ಕೆ.ರಾಜೇಂದ್ರ ಅವರು ವಿಮರ್ಶೆ, ಪ್ರಬಂಧ, ಜಾನಪದ ವಿಮರ್ಶೆ, ಸಂಶೋಧನೆ, ಜಾನಪದ ಸಮೀಕ್ಷೆ, ಸಂಪಾದನೆ ಹಾಗೂ ಮಕ್ಕಳ ಪುಸ್ತಕಗಳು ಮುಂತಾದ ತನ್ನ ಅಧ್ಯಯನಶೀಲತೆಯನ್ನು ವಿಸ್ತರಿಸಿಕೊಂಡಿದ್ದಾರೆ. ವಿಮರ್ಶಾಕ್ಷೇತ್ರದಲ್ಲಿ ಪ್ರಕಟವಾದ ಕೃತಿಗಳೆಂದರೆ, ಅನುಶೀಲನ, ಸಾಹಿತ್ಯ, ಸಂಚಯ, ಕುವೆಂಪು ಸಾಹಿತ್ಯಾವಲೋಕನ, ಒಳನೋಟ ಮೊದಲಾದವು. ಅಲ್ಲದೆ ಮಾತಿನಮಲ್ಲರು ಮತ್ತು ದೇವಗಂಗೆಯಂಥ ದಿಟ್ಟ ಪ್ರಬಂಧಗಳು ಮುಖ್ಯವೆನಿಸುತ್ತವೆ. ಇಲ್ಲಿ ನಾನು ಅವರ ಜೀವನದ ಕೆಲವು ಪ್ರಮುಖ ಘಟ್ಟಗಳನ್ನು ಮಾತ್ರ ಮುಟ್ಟಿಸುತ್ತಿದ್ದೇನೆ. ಅವರಿಗೆ ವಿಶೇಷ ಆಸಕ್ತಿ ಜನಪದ ವಿಮರ್ಶೆ ಮತ್ತು ಸಂಶೋಧನೆ, ಜನಪದ ಸಮೀಕ್ಷೆಗಳ ಬಗ್ಗೆ ದೃಷ್ಟಿಹಾಯಿಸುವುದಾದರೆ, ಜಾನಪದ ಸಂಚಯ, ಜಾನಪದ ಸಮಾಲೋಕ, ಜಾನಪದ ಸಮನ್ವಯ, ಕರ್ನಾಟಕದ ಬೊಂಬೆ ಆಟಗಳು ಮುಂತಾದವು.

ದಕ್ಷಿಣ ಕರ್ನಾಟಕ ಜಾನಪದ ರಂಗಭೂಮಿ, ಹಾಗೂ ಕರಪಾಲದವರು ಮುಂತಾದ ಕೃತಿರತ್ನಗಳು ಮುಖ್ಯವೆನಿಸುತ್ತವೆ. ಇವುಗಳ ಆಳ ಅಂತ್ಯ ತುಂಬಾ ಅಪರೂಪವೆನಿಸುತ್ತದೆ. ಈ ಹಿಂದೆ ಹೇಳಿದಂತೆ, ಜಗದಗಲ-ಮುಗಿಲಗಲ-ನಿಮ್ಮಗಲವೆಂಬಂತೆ ಶಿಷ್ಟ ಸಾಹಿತ್ಯ ಹೂವಾದರೆ ಜನಪದ ಸಾಹಿತ್ಯ ಬೇರಾದ ಬಗೆ ಹೀಗೆ. ಆದುದರಿಂದ ಡಾ. ಡಿ.ಕೆ.ರಾಜೇಂದ್ರ ಈ ಕ್ಷೇತ್ರ ಆರಿಸಿಕೊಂಡಿರಬೇಕು. ಸಂಗ್ರಹ, ಸಂಪಾದನೆ ಒಳಗೆ, ಅವರ ಗ್ರಹಿಕೆಗಳು ಯುಕ್ತವೂ ಅತ್ಯಂತ ಉಪಯುಕ್ತವೂ ಆಗಿ

ಜನಪದ ಕಲೆ, ಸಂಸ್ಕೃತಿ, ಸಾಹಿತ್ಯಗಳಿಗೆ ಸಂಬಂಧಿಸಿದ ವೈವಿಧ್ಯಪೂರ್ಣವಾದ ಸಂಪ್ರಬಂಧಗಳು ಅವರಲ್ಲಿ ಹೊರಹೊಮ್ಮಿವೆ. ಕರ್ನಾಟಕ ಜಾನಪದದ ವಿವಿಧ ಸ್ತರಗಳಿಗೆ ಸಂಬಂಧಿಸಿದ ಉತ್ತಮ ಚಿಂತನೆಗಳ ಫಲಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ.

ಇಂದು ಬಹುಮುಖ್ಯವಾಗಿ ಜನಪದ ಸಂಶೋಧನೆ ಮತ್ತು ಜಾನಪದ ಅಂತರಂಗವನ್ನು ತೋಡಿ ಹೊರತೆಗೆಯುವ ಕಾರ್ಯ ನಿರಂತರವಾಗಿ ನಡೆಯುತ್ತಿದ್ದರೂ ಸಹ ಇನ್ನೂ ಹೊಸ ಹೊಸ ಭಾವ ಮತ್ತು ಆಯಾಮಗಳು ಅದ್ಭುತವಾಗಿ ಗೋಚರವಾಗುತ್ತವೆ. ಆದರೆ ಡಾ. ಡಿ.ಕೆ.ರಾಜೇಂದ್ರ ಅವರ ದೃಷ್ಟಿಯಲ್ಲಿ ಯಾವುದೇ ಬಗೆಯ ವರ್ಗದ ಸಂಶೋಧಕರಾಗಿರಲಿ ಸಂಶೋಧನೆಯ ಹೆಸರಿನಲ್ಲಿ ಹೊಸ ಅಂಶವನ್ನು ಪ್ರಕಟಿಸುವಂತಿದ್ದರೆ ಅದಕ್ಕೆ ಬೆಲೆ ಹೆಚ್ಚಿರುತ್ತದೆ. ಜಾನಪದ ಇತಿಹಾಸಗಳಂತಹ ವಿಷಯಗಳಲ್ಲಿ ಕಾಲನಿರ್ಣಯ ಕಷ್ಟಕರವಾದದ್ದೇನೋ ನಿಜ, ಆದರೆ "ಇದಮಿತ್ಥಂ" ಎಂದು ಕಡ್ಡಿ ತುಂಡರಿಸಿದಂತೆ ಹೇಳಲು ಸಾಧ್ಯವಾಗುವುದಿಲ್ಲ. ಆದಾಗ್ಯೂ ದೊರೆತ ಆಧಾರಗಳನ್ನು ಆಶ್ರಯಿಸಿ ಹಲವು ದೃಷ್ಟಿಗಳಿಂದ ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಆ ನೆಲೆಯ ಒಳಗೆ ಡಾ। ಡಿ.ಕೆ.ರಾಜೇಂದ್ರರಂತಹ ಜೀವನ, ಬದುಕು ಬರಹ ಸ್ಪಷ್ಟವಾಗಿ ಒಡಮೂಡುತ್ತವೆ.

ಒಂದು ಭೌಗೋಳಿಕ ಹಿನ್ನೆಲೆಯಲ್ಲಿ ಮೂಡಿಬಂದ ಸಾಹಿತ್ಯ ಒಂದು ಸಾಂಸ್ಕೃತಿಕ ಚೌಕಟ್ಟಿಗೆ ಸೇರಿದ ಜಾನಪದ ಯಾವುದೇ ಒಂದು ಪ್ರಕಾರದ ಮೂಲವನ್ನು ಬೇರೊಂದೆಡೆ ಅರಸುವುದು ಎಷ್ಟು ಸಹಜ? ನಮ್ಮ ಜಾನಪದ ರಂಗಭೂಮಿಯನ್ನೇ ತೆಗೆದುಕೊಂಡರೆ ಅದರ ಪ್ರಾಚೀನತೆಯ ಬಗೆಗೆ ಬಹಳ ಹಿಂದಿನಿಂದಲೂ ವಿದ್ವಾಂಸರಲ್ಲಿ ಹಲವು ಹತ್ತು ಚರ್ಚೆಗಳು ನಡೆಯುತ್ತಲೇ ಬಂದಿವೆ. ಉದಾ: ಕರ್ನಾಟಕದಾದ್ಯಂತ ಪ್ರಚಲಿತವಾಗಿರುವ ಬಯಲಾಟ ಅಟ್ಟದಾಟ ಮೇಳ, ದೊಡ್ಡಾಟ, ಪ್ರಸಂಗ, ಬೈಲ್ಕತೆ, ಯಕ್ಷಗಾನ, ಯಕ್ಷಗಾನ ಬಯಲಾಟ, ದಶಾವತಾರದಾಟ, ಮೂಡಲಪಾಯ, ಪಡುವಲಪಾಯ, ಹೀಗೆ ನಾನಾ ನಮೂನೆಗಳಲ್ಲಿ ಇಂದಿಗೂ ಪ್ರಚಾರದಲ್ಲಿರುವ ಕಲೆ ಈ ಒಂದು ಕಲೆಯ ಪ್ರಾಚೀನತೆ, ಪ್ರಾದೇಶಿಕತೆಯ ಬಗ್ಗೆ ವಿವಿಧ ಅಭಿಪ್ರಾಯಗಳು ಕೆಲವು ವಾಸ್ತವಿಕ ನೆಲೆಗಟ್ಟಿನ ಮೇಲೆ ನಿಂತಿದ್ದರೆ, ಮತ್ತೆ ಕೆಲವು ಅಂತರಿಕ್ಷದಲ್ಲೂ ತೇಲಾಡುವ ತಟ್ಟೆ ಭದ್ರತೆಗೆ ಹಾರಾಡಿ ಹೋರಾಡುವಂತೆ ತೋರುತ್ತದೆ. ಈ ಹುಡುಕಾಟದ ಸಹವಾಸವನ್ನು ನೋಡಿದರೆ ಸಾಮಾಜಿಕ ಪ್ರಜ್ಞೆಯ ಅರಿವು ಮಾನವ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವೆನಿಸಿಬಿಡಬಹುದು. ಆದುದರಿಂದ ಸಾಹಿತ್ಯ ಮಾರ್ಗದ ವಿವಿಧ ಭಾವನೆಗಳನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿರುವುದು ಕಂಡುಬರುತ್ತದೆ. ಈ ಎಲ್ಲಾ ಕಾರಣದಿಂದ ಜನಪದ ಕಲೆಗಳು, ಕಥೆಗಳು ಪುರಾತನ ಕಾಲದ ಪಳೆಯುಳಿಕೆಗಳಾಗಿ ಕಂಡುಬರುತ್ತವೆ. ಮಾನವ ಸಂಸ್ಕೃತಿಯ ಪುನಃರಚನೆಗೆ ಈ ಮೇಲಿನ ಅಂಶಗಳು ಸಹಾಯಕವಾಗಬಲ್ಲವು. ಮಾನವ ಶಾಸ್ತ್ರೀಯ ದೃಷ್ಟಿಕೋನದಿಂದ ಅಭ್ಯಾಸ ಮಾಡಲು ಯೋಗ್ಯವೆನಿಸಿದ ಅನೇಕ ವಿಚಾರಗಳು ಜಾನಪದ ಕಲೆ ಮತ್ತು ಕಥೆಗಳಲ್ಲಿ ಅನ್ಯೋನ್ಯವಾಗಿ ಅಡಕವಾಗಿವೆ

ಎಂಬುದು ಡಾ. ಡಿ.ಕೆ.ರಾಜೇಂದ್ರ ಅವರ ಸಂಶೋಧನೆಯ ಕ್ಷೇತ್ರ ಕಾರ್ಯ ಹಾಗೂ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ.

ಬಯಲಾಟದ ಪ್ರಾಚೀನತೆ ಜನಪದ ಕಥೆಗಳ ಸಾಮಾಜಿಕ ಅಧ್ಯಯನ, ಪ್ರಾಚೀನ ಗದ್ಯ ಗ್ರಂಥಗಳಲ್ಲಿ ಜಾನಪದ ಅಂಶಗಳು, ಜನಪದ ಸಾಹಿತ್ಯ ಮತ್ತು ನಾಡಹಬ್ಬ ನವರಾತ್ರಿ, ಪಾರ್ವತಿ ಸುಬ್ಬನ ಯಕ್ಷಗಾನ ಹಾಗೂ ಅವರ ವಸ್ತುವಿನ್ಯಾಸ ಕರ್ನಾಟಕದಲ್ಲಿ ಜಾನಪದ ಪತ್ರಿಕೆಗಳು, ಮಕ್ಕಳ ಜಾನಪದ ಸಾಹಿತ್ಯ ಸ್ವರೂಪ, ಲಕ್ಷಣ, ವೈಶಿಷ್ಟ್ಯ , ಪ್ರದರ್ಶನ, ಜನಪದ ಕಲೆಗಳ ಸಾಂಸ್ಕೃತಿಕ ಮತ್ತು ವೈಚಾರಿಕ ಹಿನ್ನೆಲೆ ಮುಂತಾದ ಲೇಖನಗಳು ಡಾ। ಡಿ.ಕೆ.ರಾಜೇಂದ್ರ ಅವರ ಲೇಖನಿ ಹಾಗೂ ಚಿಂತನೆಗಳಲ್ಲಿ ಯಾದೃಚ್ಛಿಕವಾಗಿ ವಸ್ತುತಃ "ಜಾನಪದ ಕೆಲವು ಗ್ರಹಿಕೆಗಳು" ಎಂಬ ಕೃತಿಯಲ್ಲಿ ತುಂಬಾ ಅಚ್ಚುಕಟ್ಟಾಗಿ ವಿವರಿಸಿರುವುದನ್ನು ಗಮನಿಸಿದರೆ ಸ್ಪಷ್ಟವಾದೀತು.

ಜಾನಪದ ಹಿನ್ನೋಟ–ಮುನ್ನೋಟಗಳ ಬಗ್ಗೆ ಡಾ. ಡಿ.ಕೆ.ರಾಜೇಂದ್ರ ಅವರು ಚಿಂತಿಸುತ್ತ ಇದುವರೆಗೆ ಆಗಿರುವ ಮತ್ತು ಆಗಬೇಕಾಗಿರುವ ಸಾಹಿತ್ಯದ ಕಾರ್ಯ ಪ್ರಸ್ತಾಪಿಸಿ ದೊಡ್ಡ ಪಟ್ಟಿಯನ್ನು ಮುಂದಿಡುತ್ತಾ ಜಾನಪದ ವಿಶಾಲ ಜಗತ್ತಿನಲ್ಲಿ ವಿಸ್ತಾರಮಾಡಬೇಕಾದದ್ದೇ ಬಹಳಷ್ಟು ಉಳಿದಿದೆ ಎಂದು, ಸಸ್ಯ ಜಾನಪದ, ಆಕಾಶ ಜಾನಪದ, ಪ್ರಾಣಿ ಜಾನಪದ, ವಸತಿ ಜಾನಪದ ಮುಂತಾದವುಗಳನ್ನು ಒಳಹೊಕ್ಕು ನೋಡಬೇಕಾಗಿರುವ ಹಲವಾರು ಕ್ಷೇತ್ರಗಳ ಬಗ್ಗೆ ಎಚ್ಚರಿಕೆಯನ್ನು ಸಹ ನೀಡುತ್ತಿದೆ. ಅಲ್ಲದೆ ಜಾನಪದ ಕಲೆಗಳ ಉಡುಗೆ ತೊಡುಗೆ, ಅಲಂಕಾರ ಸಾಮಗ್ರಿ, ಅವರ ವಿಧಾನ, ಬೇಟೆ, ಕುಸ್ತಿ ಮುಂತಾದವುಗಳನ್ನು ಗಮನಿಸಿ, ಇಂದು ನಿತ್ಯ ಬದುಕಿನೊಂದಿಗೆ ನವನೂತನವಾಗಿ ಜಾನಪದದ ಹಲವು ಸಂಗತಿಗಳು ಜೀವಂತವಾಗಿ ಉಳಿದು ಬಂದಿರುವುದನ್ನು ಕಾಣಬಹುದು. ಇದರಂತೆ ಹಬ್ಬ ಹರಿದಿನ, ಮದುವೆ ಮುಂಜಿ, ಮನೆ ಕಟ್ಟುವುದು ಇತ್ಯಾದಿ ಸಂದರ್ಭದಲ್ಲಿನ ನಂಬಿಕೆಗಳು, ಸಂಪ್ರದಾಯಗಳ ಬಗ್ಗೆಯೂ ಜಾನಪದ ಜೀವಂತಿಕೆಯನ್ನು ಶ್ರುತಪಡಿಸುತ್ತವೆ. ಇದು ಜಾನಪದ ಜನಜೀವನದಲ್ಲಿ ಬೇರು ಬಿಟ್ಟಿವೆ ಎಂಬುದಕ್ಕೆ ಸಾಕ್ಷಿಗಳಾಗಿವೆ. ಹಾಗೇ ಅನೇಕ ಬದಲಾವಣೆ ಪಡೆದು ಮರುಹುಟ್ಟು ಹೊಂದಿವೆ.

ಜಾನಪದ ಸಂಸ್ಕೃತಿಯ ಒಂದು ಭಾಗ, ಸಂಸ್ಕೃತಿ ಜೀವಂತವಾಗಿರುವವರೆಗೆ, ಅದರ ಮೂಲಭೂತ ಅಂಶಗಳನ್ನು ಪ್ರತಿಬಿಂಬಿಸುವ ಜಾನಪದ ಅಂಶಗಳು ಜೀವಂತವಾಗಿ ಉಳಿದೇ ಇರುತ್ತವೆ ಎಂಬುದು ಡಾ. ಡಿ.ಕೆ.ರಾಜೇಂದ್ರ ಅವರ ಅನಿಸಿಕೆಗೆ ನಾನು ಇಲ್ಲಿ ಮತ್ತಷ್ಟು ಒತ್ತುಕೊಡುತ್ತೇನೆ. ಅದು ಹುಟ್ಟಿದ್ದು ಬೆಳೆದದ್ದು, ಜನಪದದ ಬದುಕಿನೊಂದಿಗೆ, ಭಾವನೆಗಳ ಅಭಿವ್ಯಕ್ತಿ ಹಾಗೂ ಜೀವನದಲ್ಲಿ ಕಂಡು ಕೇಳಿ ಅನುಭವಿಸಿದ ನಾನಾ ಬಗೆಯ ಸಂಗತಿಗಳು ಕಂಠಸ್ಥ ಸಂಪ್ರದಾಯದೊಂದಿಗೆ ಮಾರ್ದನಿಗೊಂಡು ಮೌಖಿಕ ಪರಂಪರೆಯು ಜನಪದ ಪ್ರತಿಭೆಗೆ ಒಂದು ಜೀವಂತ ಸಾಕ್ಷಿಯೆಂಬುದು ಬೇರೆ ಮಾತಿಲ್ಲ.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಜಾನಪದ ಕ್ಷೇತ್ರದಲ್ಲಿ ಮೊಟ್ಟಮೊದಲ

ಜಾನಪದ ಅಧ್ಯಯನ ನಡೆಸಿದ ಬಿ.ಎಸ್.ಗದ್ದಗಿಮಠ ಅವರ ಹಾದಿಮನಿ ಬೇಂದ್ರೆ, ಸಿಂಪಿ ಲಿಂಗಣ್ಣ, ಅರ್ಚಕರು ಬಿ.ರಂಗಸ್ವಾಮಿ, ಎಸ್.ಕೆ.ಖರೀಂಖಾನ್, ಪ್ರೊ. ಕು.ಶಿ. ಹರಿದಾಸಭಟ್, ಡಾ. ಎಂ.ಎಸ್.ಸುಂಕಾಪುರ, ಡಾ. ಜೀ.ಶಂ.ಪ, ಡಾ. ಹೆಚ್.ಎಲ್. ನಾಗೇಗೌಡ, ಡಾ. ಗೊರೂರ ಅಯ್ಯಂಗಾರ್, ದೇವೇಂದ್ರ, ತೀ.ನಂ.ಶಂಕರನಾರಾಯಣ ಮುಂತಾದವರು, ಅಂತೆಯೇ ಡಾ. ಡಿ.ಕೆ.ರಾಜೇಂದ್ರ ಅವರು ಸಾಧನೆ ಹಾದಿಯಲ್ಲಿ ಕೈ ಜೋಡಿಸಿದ್ದಾರೆ. ಅಲ್ಲದೆ ಸಾಂಸ್ಕೃತಿಕವಾಗಿ ಗಟ್ಟಿತನವನ್ನು ಹೊಂದಿರುವ ವಿಶಿಷ್ಟ ಸಮಾಜದ ಅಪೂರ್ವ ಸಾಂಸ್ಕೃತಿಕ ಕೊಡುಗೆಗಳಾಗಿದ್ದಾರೆ ಎಂದರೆ ತಪ್ಪಾಗಲಾರದು.

ಡಾ. ಡಿ.ಕೆ.ರಾಜೇಂದ್ರ ಅವರು ತಮ್ಮ ಜಾನಪದ ಎಂಬ ಕೃತಿಯಲ್ಲಿ ವಿಶೇಷವಾಗಿ ಜನಪದ ಕಲೆ ಮತ್ತು ಸಂಸ್ಕೃತಿ, ಜನಪದ ಕಲೆ ಮತ್ತು ಧರ್ಮ, ಬಯಲಾಟಗಳ ಜೀವಾಳ, ಕಥೆಗಾರ, ಹಿಮ್ಮೇಳ, ಜನಪದ ನೃತ್ಯ ನಾಟಕಗಳು ಮತ್ತು ಬೊಂಬೆಯಾಟಗಳು, ಗಾದೆ ಒಂದು ವಿವೇಚನೆ, ಜನಪದ ಸಾಹಿತ್ಯ, ಉತ್ತರ ದೇವಿ, ಕರ್ನಾಟಕ ಜಾನಪದ ಅಧ್ಯಯನ ಮುಂತಾದ ಗಂಭೀರ ವಿಚಾರಗಳನ್ನು ಕುರಿತು ತಮ್ಮದೇ ಆದ ರೀತಿ ವಸ್ತುನಿಷ್ಠವಾಗಿ ಪ್ರಸ್ತಾಪಿಸಿದ್ದಾರೆ.

ಸಂಸ್ಕೃತಿಯಲ್ಲಿ ಕಲೆಯ ಸ್ಥಾನ ಎಂಬ ವಿಚಾರ ಕುರಿತು ಉಪನ್ಯಾಸ ನೀಡುತ್ತಾ "ಕಲೆ ಇಲ್ಲದ ಬಾಳು ಅಲೆಯಿಲ್ಲದ ಕಡಲಿನಂತೆ" ಎಂದು ಹೇಳಿ ಅದಕ್ಕೆ ಸ್ಪಷ್ಟ ವಿವರ ಕೊಡುತ್ತಾರೆ. ಅಂದರೆ ಆ ಕಡಲಿನಿಂದ ಉಪಯೋಗವಿಲ್ಲವೆಂದು ಅಲ್ಲ, ಅಲೆ ಎದ್ದಾಗ ಪಡೆದುಕೊಳ್ಳುತ್ತಿದ್ದ ಉಪಯೋಗವನ್ನೇ ಅಲೆ ಇಲ್ಲದಾಗಲೂ ಪಡೆದುಕೊಳ್ಳಬಹುದು.

ಇಂದಿನ ನಾಗರಿಕತೆಯ ಪ್ರಭಾವದಿಂದಾದರೂ ಮೇಲಿನ ಎಲ್ಲಾ ಕಾರಣಗಳಿಂದಾಗಿ ಜಾನಪದ ಸಾಹಿತ್ಯವು ಸಮಾಜದೊಂದಿಗಿನ ಬಿಗಿ ಸಡಿಲವಾಗಿ ಹಳೆಯ ಮೌಲ್ಯಗಳು ಕಣ್ಮರೆಯಾಗತೊಡಗಿದವು. ವ್ಯಕ್ತಿ ವ್ಯಕ್ತಿಗೆ ಹಿಂದೆ ಇದ್ದ ಮಧುರ ಬಾಂಧವ್ಯ ಕಡಿದುಹೋಗಿ ಒಂದು ಬಗೆಯ ವ್ಯಾವಹಾರಿಕ ಸಂಬಂಧ ಏರ್ಪಟ್ಟಿತು. ಜನಪದ ಸಂಸ್ಕೃತಿ ಅಂದಿನಿಂದಲೇ ಹುಟ್ಟಿ ಬೆಳೆದದ್ದು, ಅದು ತನ್ನ ಎಲ್ಲಾ ಮೂಲ ಅಂಶಗಳನ್ನು ಹಸಿಹಸಿಯಾಗಿ ಉಳಿಸಿಕೊಂಡು ಬಂದಿರುತ್ತದೆ. ಜನಪದರ ಪ್ರತಿಯೊಂದು ನುಡಿ ನಡಾವಳಿಗಳು, ಆಚಾರ, ವಿಚಾರಗಳು ವಿಶೇಷವಾದ ರೀತಿಯಲ್ಲಿ ಪ್ರತಿನಿಧಿಸುತ್ತವೆ. ಅದರ ಬೇರುಗಳು ಸಮಾಜದ ಅಂತರಾಳವನ್ನು ಹೊಕ್ಕಿರುತ್ತವೆ. ಇದರ ಒಂದು ಬೇರನ್ನು ಅಲುಗಿಸುವುದೆಂದರೆ ಇಡೀ ಸಮಾಜವನ್ನು ಎದರಿಸಿದಂತೆ. ಜಾನಪದ ಸಮಾಜದ ಬಂಧನ ಆ ಬಗೆಯದು. ಈ ದೃಷ್ಟಿಯಿಂದ ಎಲ್ಲಾ ಸಂಸ್ಕಾರ-ಆಚಾರ-ವಿಚಾರಾದಿ ಸಂಸ್ಕೃತಿಗಳು, ಜನಪದ-ಜಾನಪದ ನರನಾಡಿಗಳ ಮೂಲಕ ರಕ್ತಗತವಾಗಿ ಬಂದಂತೆ ಭಾಸವಾಗುತ್ತದೆ ಎಂಬುದು ಸ್ಪಷ್ಟ ಹಾಗೂ ಸತ್ಯ.

ಹೀಗೆ ಡಾ. ಡಿ.ಕೆ.ರಾಜೇಂದ್ರ ಅವರು ಕನ್ನಡ ಸಾಹಿತ್ಯದ ಒಬ್ಬ ಚಿಂತಕರಾಗಿ ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಹಾಗೂ ಇಡೀ ಸಾಹಿತ್ಯದ ಸಾರಸ್ವತ ಲೋಕದಲ್ಲಿ ಗುರುತಿಸಿಕೊಂಡವರು. ಡಾ. ಡಿ.ಕೆ.ರಾಜೇಂದ್ರ ತುರುವೇಕೆರೆ ತಾಲ್ಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಸಹ ಆಗಿದ್ದನ್ನು ಇಲ್ಲಿ ಗಮನಿಸಬೇಕಾಗಿದೆ.

ಹೀಗೆ ಡಾ. ಡಿ.ಕೆ.ರಾಜೇಂದ್ರರವರು ಇತ್ತೀಚಿನ ಮುಂಚೂಣಿಯ ಜಾನಪದ ವಿದ್ವಾಂಸರಲ್ಲಿ ಒಬ್ಬರು ಹಾಗೂ ಗಣ್ಯ ಮತ್ತು ಲಲಿತ ಪ್ರಬಂಧಕಾರರಲ್ಲಿ ಒಬ್ಬ ಗಣ್ಯರೆನಿಸಿಕೊಂಡಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಚಿದಾನಂದಮೂರ್ತಿ ಎಂ., (1977), ಗ್ರಾಮೀಣ, ಬೆಂಗಳೂರು: ಬಾಪ್ಕೊ ಪ್ರಕಾಶನ.
2. ಪರಮಶಿವಯ್ಯ ಜೀ. ಶಂ., (1995), ಜಾನಪದ ಕಲೆಗಳು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
3. ಎಣ್ಣೆಕಟ್ಟೆ ಚಿಕ್ಕಣ್ಣ, (2006), ತುಮಕೂರು ಜಿಲ್ಲಾ ಜಾನಪದ ಕಲೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ಚನ್ನಬಸಪ್ಪ ಗೊ. ರು. (ಸಂ.), (1977), ಕರ್ನಾಟಕ ಜನಪದ ಕಲೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
5. ಪರಮಶಿವಯ್ಯ ಜೀ. ಶಂ., (1979), ದಕ್ಷಿಣ ಕರ್ನಾಟಕದ ಜಾನಪದ ಕಲೆಗಳು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
6. ಪರಮಶಿವಯ್ಯ ಜೀ. ಶಂ., (1979), ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.